ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಯಾವುದೇ ಕಾನೂನು ತರಬೇಕಾದರೂ ಪ್ರಾಸ್‌ಪೆಕ್ಟೀವ್ ಆಗಿ ತರಬೇಕೆ ಹೊರತು, ರೆಟ್ರಾಸ್ಪೆಕ್ಟೀವಾಗಿ ಅಲ್ಲ.

ಶ್ರೀ ಎಂ. ರಘುಪತಿ.—ತಜ್ಞರ ಅಭಿಪ್ರಾಯ ಪಡೆದು, ತಾತ್ವಿಕ ಆಧಾರದ ಮೇಲೆ ಈ ಕಾನೂನನ್ನು ಜಾರಿಗೆ ತಂದಿದ್ದೇವೆ.

ಕರ್ನಾಟಕ ವಿಶ್ವವಿದ್ಯಾನಿಲಯದಿಂದವರಿಂದ ಜಾಹಿರಾತು ಮಾಡಿದ ಹುದ್ದೆಗಳು.

೩೧೯. ಶ್ರೀ ಬಿ. ಬಸವಲಿಂಗಪ್ಪ(ಯಲಹಂಕ).—ಮಾನ್ಯ ಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪ ರಿಂದ ಇಲ್ಲಿಯವರೆಗೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಫ್ಯಾಕಲ್ಟಿಗಳಲ್ಲಿ ಜಾಹಿರಾತುಪಡಿಸಿದ ಹುದ್ದೆಗಳ ಸಂಖ್ಯೆ

ಆ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಕಾಯ್ದಿರಿಸಿದ ಸ್ಥಾನಗಳೆಷ್ಟು ?

ಇ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಲ್ಲಿದ್ದ ಹುದ್ದೆಗಳಿಗೆ ಪ್ರಕಟಿಸಿದ ಜಾಹಿರಾತು

ಈ) ರೋಸ್ಟರ್ ಪದ್ಧತಿಯ ಮೇಲೆ ಹಾಗೂ ಜಾಹಿರಾತಿನ ಪ್ರಕಾರ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಭರ್ತಿ ಮಾಡಿದ ಹುದ್ದೆಗಳು ?

ಉ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಕಾಯ್ದಿರಿಸಿದ ಜಾಹಿರಾತುಪಡಿಸಲಾದ ಹುದ್ದೆಗಳನ್ನು ಬಿ. ಸಿ. ಟಿ. ಬಿ. ಎಸ್. ಜಿ. ಬಿ. ಸಿ. ಎಮ್ ಮತ್ತು ಜಿ. ಎಮ್ ವರ್ಗಗಳಿಗೆ ಪರಿವರ್ತಿಸಿದ ಹುದ್ದೆಗಳು ?

ಶ್ರೀ ಎಂ. ರಘುಪತಿ(ಶಿಕ್ಷಣ ಸಚಿವರು).—

ಅ) ಪ್ರಾಧ್ಯಾಪಕರು ... ೧೬
ರೀಡರ್ಸ್ ... ೪೮
ಅಧ್ಯಾಪಕರು ... ೯೫

ಒಟ್ಟು ೧೫೯

		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
ಅ)	ಪ್ರಾಧ್ಯಾಪಕರು	೪	೧
	ರೀಡರ್ಸ್	೮	೨
	ಅಧ್ಯಾಪಕರು	೧೯	೭
	ಒಟ್ಟು	೩೧	೧೦
ಇ)	ಪ್ರಾಧ್ಯಾಪಕರು	೧೧	
	ರೀಡರ್ಸ್	೩೮	
	ಅಧ್ಯಾಪಕರು	೬೯	
	ಒಟ್ಟು	೧೧೮	

ಈ) ಪ್ರಾಧ್ಯಾಪಕರು ಇಲ್ಲ.
ರೀಡರ್ಸ್ ೨ (ಪರಿಶಿಷ್ಟ ಜಾತಿ)
ಅಧ್ಯಾಪಕರು ೪ (ಪರಿಶಿಷ್ಟ ಜಾತಿ)

ಉ) ಪರಿಶಿಷ್ಟ ಜಾತಿಗೆ ಕಾಯ್ದಿರಿಸಿದ ಒಂದು ರೀಡರ್ ಹುದ್ದೆಯನ್ನು ಜಿ. ಎಮ್ ವರ್ಗಕ್ಕೆ ಪರಿವರ್ತಿಸಲಾಗಿದೆ ಪರಿಶಿಷ್ಟ ಪಂಗಡಕ್ಕೆ ಕಾಯ್ದಿರಿಸಿದ ಒಂದು ರೀಡರ್ ಹುದ್ದೆಯನ್ನು ಜಿ. ಎಮ್. ವರ್ಗಕ್ಕೆ ಪರಿವರ್ತಿಸಲಾಗಿದೆ. ಪರಿಶಿಷ್ಟ ಜಾತಿಗೆ ಕಾಯ್ದಿರಿಸಿದ ಒಂದು ಹುದ್ದೆಯನ್ನು ಜಿ. ಎಮ್ ಗೆ ಪರಿವರ್ತಿಸಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ. —ಮಾನ್ಯ ಅಧ್ಯಕ್ಷರೇ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಕಾಯ್ದಿರಿಸಿದ ಸ್ಥಾನಗಳ ಮೇರೆಗೆ ೪೧ ಹುದ್ದೆಗಳಿಗೆ ಅಂದರೆ, ೩೧ ಮತ್ತು ೧೦ ಜಾಹೀರಾತು ಮಾಡಿದ್ದೀರಿ. ಅದರಲ್ಲಿ ತೆಗೆದುಕೊಂಡಿರುವುದು ೭ ಪರಿಶಿಷ್ಟ ಜಾತಿ ಮತ್ತು ೨ ಪರಿಶಿಷ್ಟ ಪಂಗಡದವರು, ತಾವು ಹೇಳಿದಂತೆ ವಿದ್ಯಾ ಇಲಾಖೆ ತಾತ್ವಿಕ ತಳಹದಿ ಮೇಲೆ ನಡೆಯುತ್ತಿದೆ ಎನ್ನುವ ಭರವಸೆ ನನಗೆ ಇಲ್ಲ. ೪೧ ಜಾಹೀರಾತು ಮಾಡಿ, ಬರೀ ೯ನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ತಾತ್ವಿಕ ಆಧಾರವೇನು? ಈ ಬಗ್ಗೆ ಚ್ಯುತಿ ಮಾಡಿದವರು ಯಾರು? ಭ್ರಷ್ಟತನ ಮಾಡಿದವರು ಯಾರು? ರಾಜ್ಯಾಂಗದತ್ತವಾದ ಹಕ್ಕಿಗೆ ಭ್ರಷ್ಟತನ ಮಾಡಿದವರು ಯಾರು?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಶ್ವವಿದ್ಯಾನಿಲಯದವರು ಮಾತ್ರ ಉಲ್ಲಂಘನೆ ಮಾಡಿಲ್ಲ. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ಕಾನೂನು ಉಲ್ಲಂಘನೆ ಆಗಿದೆ. ಈ ವಿಷಯ ನನ್ನ ಗಮನಕ್ಕೆ ಬಂದ ತಕ್ಷಣ ಅಂತರ ವಿಶ್ವ ವಿದ್ಯಾನಿಲಯ ಮಂಡಲಿ ಸಭೆಯಲ್ಲಿ ಚರ್ಚೆ ಮಾಡಿ, ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಹಾಲಿ ಇದ್ದಂಥ ಕಾಯಿದೆಯಲ್ಲಿಯೇ ನ್ಯೂನತೆ ಇತ್ತು. ಮಾನ್ಯ ಅಧ್ಯಕ್ಷರೇ, ರೋಸ್ಟರ್ ಪದ್ಧತಿಯನ್ನು ಅನ್ವಯಿಸಬೇಕಾದರೆ, ರೊಟೇಷನ್‌ನಲ್ಲಿ ಯಾವ ರೀತಿ ಬರುತ್ತಿತ್ತು ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ರೀತಿ ವಿತಕ್ಕೆ ಮಾಡಿದ್ದರೋ ನನಗೆ ಗೊತ್ತಿಲ್ಲ. ಅದನ್ನು ಯಾರೇ ಮಾಡಿದ್ದರೂ ತಪ್ಪೇ. ಆ ಒಂದು ಸರದಿಗೆ ಸಂಸ್ಕೃತ ಮತ್ತು ಹಿಂದಿಯಲ್ಲಿ ವ್ಯಾಸಂಗ ಮಾಡಿದವರು ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಇರುವುದಿಲ್ಲ. ಅರ್ಹ ಅಭ್ಯರ್ಥಿಗಳು ಇಲ್ಲ ಎಂದೂ ಹೇಳಿ, ಅವರನ್ನು ಕಡೆಗಣಿಸಿ, ಅದನ್ನು ಜನರಲ್ ಮೆರಿಟ್‌ಗೆ ತಳ್ಳಿದ್ದಾರೆ. ಈಗ ಅದಕ್ಕೆ ತಿದ್ದುಪಡಿ ಮಾಡಿ, ಇದು ಆಗುವವರೆಗೆ ಯಾವುದೇ ಹುದ್ದೆಗಾಗಲೀ ನೇಮಕ ಮಾಡಬಾರದೆಂಬ ಆದೇಶ ಕೊಟ್ಟಿದ್ದೇನೆ. ಅಲ್ಲದೆ, ತಪ್ಪು ಮಾಡಿದಂಥ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಯಾರೂ ಈ ನಿಯಮವನ್ನು ಪರಿಪಾಲನೆ ಮಾಡುವುದಿಲ್ಲವೋ, ಅಂಥವರನ್ನು ಅಪ್ರೂವ್ ಮಾಡುವುದಿಲ್ಲ, ಹಣ ಕೂಡ ಕೊಡುವುದಿಲ್ಲ.

ಅಧ್ಯಕ್ಷರು.—ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ರಘುಪತಿಯವರು ಪ್ರಾಮಾಣಿಕವಾಗಿ ಉತ್ತರ ಕೊಟ್ಟಿದ್ದಾರೆಂದು ಅಧ್ಯಕ್ಷರು ಹೇಳಿದ್ದಾರೆ. ಯಾವ ಕಾಲಕ್ಕಾದರೂ ಯೂನಿವರ್ಸಿಟಿಗಳು, ಎಜುಕೇಷನ್ ಸಂಸ್ಥೆಗಳು ಜಾತಿಯನ್ನು ಅನುಸರಿಸಿ ಕೆಲಸ ಮಾಡುವುದು ಅಮ ತಪ್ಪಾಗುತ್ತದೆ. ಕರ್ನಾಟಕ ವಿಶ್ವವಿದ್ಯಾಲಯ ಆಗಲಿ, ಬೆಂಗಳೂರು ವಿಶ್ವವಿದ್ಯಾಲಯ ಆಗಲಿ, ಯಾವುದೇ ಆಗಲಿ ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ತೀವ್ರವಾಗಿ ಕ್ರಮ ತೆಗೆದುಕೊಂಡು ಪರಿಶಿಷ್ಟ ಜಾತಿಯವರಿಗೆ ಪ್ರಾಥಮಿಕ ಮತ್ತು ರೀಡರ್ ಹುದ್ದೆಗಳನ್ನು ಇರತಕ್ಕ ಅಭ್ಯರ್ಥಿಗಳಿಗೆ ಕೊಡಲಿಕ್ಕೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡು ನೇರವಾಗಿ ತುಂಬಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ರಘುಪತಿ.—ಅದು ಒಂದೂ ಯೋಚನೆ ಇದೆ. ನೇರವಾಗಿ ಕ್ಲಾಸ್-೧ ಕ್ಲಾಸ್-೨ ಹುದ್ದೆಗಳಿಗೆ ನೇಮಕ ಮಾಡುವಂತೆ ಇಲ್ಲಿಯೂ ಆ ತರಹ ಮಾಡುವುದಕ್ಕೆ ಕಾನೂನು ಪರಿಶೀಲನೆಯಿಂದ ಮಾಡುತ್ತಿದ್ದೇನೆ. ಕಾನೂನು ಪರಿಶೀಲನೆಯಿಂದ ಅದನ್ನು ಮಾಡಲಿಕ್ಕೆ ಬರುತ್ತದೆ ಅಂದರೆ ನಿಮ್ಮೆಲ್ಲರ ಮಂತ್ರ, ಸಭೆಯ ಅನುಮೋದನೆಯನ್ನು ಪಡೆದು ಕಾನೂನು ಬದಲಾವಣೆ ಮಾಡುತ್ತೇನೆ. ಅದರ ಬಗ್ಗೆ ಕಾನೂನು ತಿದ್ದುಪಡಿಯನ್ನು ತರುತ್ತಿದ್ದೇನೆ, ಅದಕ್ಕೆ ತಾವುಗಳೆಲ್ಲ ಸಹಕಾರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ಯೂನಿವರ್ಸಿಟಿಯ ವೈಸ್-ಛಾನ್ಸಲರ್ ಆಗಲೀ ಯಾರೇ ಆಗಲಿ ಅನುಸೂಚಿತ ಜಾತಿ ಮತ್ತು ವರ್ಗಗಳವರಿಗೆ ವಿರುದ್ಧವಾಗಿ ವರ್ತನೆ ಮಾಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ವಿರುದ್ಧವಾಗಿ ನಡೆದುಕೊಂಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಅವರ ನಡತೆ

ಸರಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನಾಲ್ಕೈದು ಯೂನಿವರ್ಸಿಟಿಗಳು ವೈಸ್-ಛಾನ್ಸಲರ್‌ಗಳನ್ನು ಶಿಫಾರಸ್ಸು ಮಾಡಿದ್ದರೂ, ಚಾನ್ಸಲರ್ ಎಕ್ಸಿಕ್ಯುಟೀವ್ ಆಫೀಸರ್ ಆಗಿದ್ದು ಅನುಸೂಚಿತ ಜಾತಿಯವರಿಗೆ ಸಂಬಂಧಪಟ್ಟ ಹಾಗೆ ಶಿಫಾರಸ್ಸುಗಳು ಬಂದರೆ ತಕ್ಷಣ ವಜಾ ಮಾಡಿ ಸುಮಾರು ನಾಲ್ಕೈದು ಕೇಸುಗಳಲ್ಲಿ ಒಂದನ್ನೂ, ಕೂಡ ಅಪ್ರೂ ಮಾಡಿಲ್ಲ. ಅಪ್ರೂ ಮಾಡಿರುವುದನ್ನು ಯಾವ ಆಧಾರದ ಮೇಲೆ ಅಪ್ರೂ ಮಾಡಿದರು? ಯಾವ ಆಧಾರದ ಮೇಲೆ ಅಪ್ರೂ ಮಾಡಿಲ್ಲ? ನನಗೆ ಸರಿಯಾಗಿ ನಿಲುವು ಏನೆಂಬುದನ್ನು ತಿಳಿಸಬೇಕು. ಚಾನ್ಸಲರ್ ಆಗಿರತಕ್ಕವರು ನಿಮ್ಮ ವರ್ಗದವರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ರಾಜ್ಯಾಂಗ ನೀತಿಗೆ ವಿರುದ್ಧವಾಗಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. He is not interested in the welfare of Scheduled Castes. He has rejected so many recommendations of all the Universities. Why? They are all fully qualified. I will give so many instances. He rejects them out right. Why? Does he wants his own caste people there?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳು ಬಹಳ ದಕ್ಷರಿದ್ದಾರೆ, ಪ್ರಾಮಾಣಿಕರಿದ್ದಾರೆ, ಅವರು ಉತ್ತಮವಾದ ವ್ಯಕ್ತಿಗಳು ಅವರಿಗೆ ಒಳ್ಳೆಯ ಹೆಸರು ಇದೆ. ಮಾನ್ಯ ಪಾಟೀಲ್‌ರವರು ಒಂದು ವಿಷಯವನ್ನು ಹೇಳಿದ್ದಾರೆ. ಅದರ ಬಗ್ಗೆ ಕಾನೂನು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಬಸವಲಿಂಗಪ್ಪನವರು ಛಾನ್ಸಲರ್‌ರ ಅವರ ಬಗ್ಗೆ ಏನು ತಮ್ಮ ಅನಿಸಿಕೆಗಳನ್ನು ಹೇಳಿದ್ದಾರೆ ಅದನ್ನು ಛಾನ್ಸಲರ್‌ರವರ ಗಮನಕ್ಕೆ ತರುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸವದತ್ತಿ ವಿಜ್ಞಾನ ಕಾಲೇಜು

೫೪೭. ಶ್ರೀ ಚಂದ್ರಶೇಖರ್ ಪಾವಂಜಿ (ಪರಸಗಡ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸವದತ್ತಿ ತಾಲ್ಲೂಕಿನಲ್ಲಿ ವಿಜ್ಞಾನ ಕಾಲೇಜಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸವದತ್ತಿ ಸದರೀ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ಸವದತ್ತಿಯಲ್ಲಿ ಈಗ ವಿಜ್ಞಾನ ಬೋಧಿಸುವ ಕಿರಿಯ ಕಾಲೇಜು ಇಲ್ಲದಿರುವುದರಿಂದ ವಿಜ್ಞಾನ ಪ್ರಥಮದರ್ಜೆ ಕಾಲೇಜಿನ ಮಂಜೂರಾತಿ ಸಾಧ್ಯವಾಗುವುದಿಲ್ಲ.

ಶ್ರೀ ಚಂದ್ರಶೇಖರ್ ಪಾವಂಜಿ.—ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರದಲ್ಲಿ ಸವದತ್ತಿಯಲ್ಲಿ ಈಗ ವಿಜ್ಞಾನ ಬೋಧಿಸುವ ಕಿರಿಯ ಕಾಲೇಜು ಇಲ್ಲದಿರುವುದರಿಂದ ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಮಂಜೂರಾತಿ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ಹಿರಿಯ ಕಾಲೇಜು ಮಂಜೂರು ಮಾಡುವುದಕ್ಕೆ ಸಾಧ್ಯವಾಗದಿದ್ದರೆ ಕಿರಿಯ ಕಾಲೇಜನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಎಂ. ರಘುಪತಿ.—ಸವದತ್ತಿಯಲ್ಲಿ ಸರ್ಕಾರಿ ಕಿರಿಯ ಕಾಲೇಜು ಇಲ್ಲ. ಕಿರಿಯ ಕಾಲೇಜನ್ನು ತೆರೆಯಬೇಕೆನ್ನುವ ವಿಷಯವನ್ನು ಮಾನ್ಯ ಸದಸ್ಯರು ಈಗ ಸಭೆಯ ಮುಂದಿಟ್ಟಿದ್ದಾರೆ. ಕಿರಿಯ ಕಾಲೇಜುಗಳನ್ನು ಮಂಜೂರು ಮಾಡುವಾಗ ಸವದತ್ತಿಗೂ ಮಂಜೂರು ಮಾಡುತ್ತೇವೆ.

ಶ್ರೀ ಚಂದ್ರಶೇಖರ್ ಪಾವಂಜಿ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರವನ್ನು ತೃಪ್ತಿಕರವಾಗಿ ಕೊಟ್ಟಿದ್ದಾರೆ ತಾವು ಕುಳಿತುಕೊಳ್ಳಿ.